**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 959 (1156) |
| ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ಕೆ.ಎಸ್. ನವೀನ್<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |
| ಉತ್ತರಿಸುವ ದಿನಾಂಕ | : | 16.12.2025 |

<table>
<tr><th>ಕ್ರ.<br>ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕೈಗಾರಿಕೆಗೆ ಉತ್ತೇಜನ ನೀಡಲು ಸರ್ಕಾರದಿಂದ ಯಾವ ಸವಲತ್ತು ನೀಡಲಾಗುತ್ತಿದೆ;</td><td>ಕೈಗಾರಿಕೆಗೆ ಉತ್ತೇಜನ ನೀಡಲು ಕೆಳಕಂಡ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಕೈಗಾರಿಕಾ ನೀತಿ 2025-30 ರನ್ವಯ ಕಲ್ಪಿಸಲಾಗುತ್ತದೆ:-
<table>
<tr><td>1</td><td>ಬಂಡವಾಳ ಹೂಡಿಕೆ ಪ್ರೋತ್ಸಾಹಧನ / ಉದ್ಯಮಗಳಿಗೆ ಉತ್ಪಾದನಾ ಸಂಯೋಜಿತ ಉತ್ತೇಜನಗಳು.</td></tr>
<tr><td>2</td><td>ಮುದ್ರಾಂಕ ಶುಲ್ಕ ವಿನಾಯಿತಿ ಹಾಗೂ ನೋಂದಣಿ ಶುಲ್ಕ ವಿನಾಯಿತಿ</td></tr>
<tr><td>3</td><td>ಭೂಪರಿವರ್ತನಾ ಶುಲ್ಕ ಮರು ಪಾವತಿ</td></tr>
<tr><td>4</td><td>ತ್ಯಾಜ್ಯ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಹಾಯಧನ</td></tr>
<tr><td>5</td><td>ಕೈಗೆಟಕುವ ಕೈಗಾರಿಕಾ ವಸತಿ ಗೃಹ ಸಬ್ಸಿಡಿ.</td></tr>
<tr><td>6</td><td>ಸುಸ್ಥಿರತೆ ಸಂಯೋಜಿತ ಉತ್ತೇಜಕಗಳು.</td></tr>
<tr><td>7</td><td>ಉದ್ಯಮಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಬೂಸ್ಟರ್</td></tr>
<tr><td>8</td><td>ಸರಕು ಸಾಗಣೆ ಮತ್ತು ಉಗ್ರಾಣಗಳಿಗೆ ಹಣಕಾಸು ಉತ್ತೇಜಕಗಳು</td></tr>
<tr><td>9</td><td>ವಿದ್ಯುತ್ ಶುಲ್ಕದ ಮೇಲಿನ ತೆರಿಗೆ ವಿನಾಯಿತಿ</td></tr>
<tr><td>10</td><td>ವಿದ್ಯುಚ್ಛಕ್ತಿ ಸಹಾಯಧನ</td></tr>
<tr><td>11</td><td>ತಂತ್ರಜ್ಞಾನ ಅಳವಡಿಕೆ & ನವೋನ್ವೇಶಣೆ ಉತ್ತೇಜನ</td></tr>
<tr><td>12</td><td>ಆರ್ & ಡಿ ಮತ್ತು ಉತ್ಪಾದನೆಗಳ ಸಹ ಸ್ಥಳಗಳಿಗೆ ಬೂಸ್ಟರ್</td></tr>
<tr><td>13</td><td>ರಫ್ತು ಘಟಕಗಳಿಗೆ ಪ್ರೋತ್ಸಾಹ</td></tr>
<tr><td>14</td><td>ಸುಸ್ಥಿರತೆ & ಜವಾಬ್ದಾರಿಯುತ ಕೈಗಾರಿಕೀಕರಣ ಉತ್ತೇಜನ</td></tr>
</table>
ಮುಂದುವರೆದು, ರಾಜ್ಯದಲ್ಲಿ ಕೈಗಾರಿಕೆಗಳ ಸ್ಥಾಪನೆಗಾಗಿ ಮತ್ತು ಹೊಸ ಕೈಗಾರಿಕೆಗಳನ್ನು ಆಕರ್ಷಿಸಲು ಸರ್ಕಾರವು ಕೆಳಕಂಡ ಆದ್ಯತಾ / ಪ್ರೋತ್ಸಾಹಕ ಕ್ರಮಗಳನ್ನು ಕೈಗೊಳ್ಳಲಾಗಿದೆ.<br><br>
➢ ದೇಶ-ವಿದೇಶಗಳ ಹಲವಾರು ಪ್ರತಿಷ್ಠಿತ ಕಂಪನಿಗಳೊಂದಿಗೆ ಕರ್ನಾಟಕದಲ್ಲಿ ಬಂಡವಾಳ ಹೂಡಲು ಸರಣಿ ಸಭೆಗಳನ್ನು ನಡೆಸಲಾಗುತ್ತಿದೆ.</td></tr>
</table>

| | | |
|---|---|---|
| | | ➢ ಕೈಗಾರಿಕೆಗಳನ್ನು ಪ್ರಾರಂಭಿಸಲು ಬೇಕಾಗಿರುವ ಭೂಮಿ ಖರೀದಿ ಪ್ರಕ್ರಿಯೆ ಸರಳೀಕರಣ ಗೊಳಿಸಲಾಗಿದೆ.<br><br>➢ ಕೈಗಾರಿಕೆಗಳನ್ನು ಪ್ರಾರಂಭಿಸಲು ಬೇಕಾಗಿರುವ ಕೆಲವು ಮುಖ್ಯ ಎನ್.ಒ.ಸಿ / ಒಪ್ಪಿಗೆಗಳನ್ನು ಸ್ವಯಂ ಘೋಷಣ ಪತ್ರದ ಆಧಾರದ ಮೇಲೆ ಪಡೆಯಲು 3 ವರ್ಷಗಳವರೆಗೆ ವಿಸ್ತರಿಸಿ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ 2002ಕ್ಕೆ ತಿದ್ದುಪಡಿ ತರಲಾಗಿದೆ.<br><br>➢ ರಾಜ್ಯದಲ್ಲಿ ಸುಲಲಿತ ವ್ಯವಹಾರಕ್ಕೆ (EODB) ಒತ್ತು ನೀಡಲು ಹಾಗೂ ರಾಜ್ಯದಲ್ಲಿ ಇನ್ನೂ ಹೆಚ್ಚಿನ ಕೈಗಾರಿಕಾ ಸ್ನೇಹಿ ವಾತವರಣ ಸೃಷ್ಟಿಸಲು ಏಕಗವಾಕ್ಷಿ ಪೋರ್ಟಲ್ (Single Window Portal -SWP) ಅಭಿವೃದ್ಧಿಪಡಿಸಲಾಗಿದೆ ಹಾಗೂ ಇತರೆ ಸಂಬಂಧಿಸಿದ ಇಲಾಖೆಗಳ ಸೇವೆಗಳನ್ನು ಸಂಯೋಜಿಸಲಾಗಿದೆ.<br><br>➢ ಜಿಲ್ಲಾ ಮಟ್ಟದಲ್ಲಿಯೂ ಯೋಜನೆಗಳಿಗೆ ಅನುಮೋದನೆ ಪಡೆಯಲು Online ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. |
| ಆ | ಒಂದು ಕೈಗಾರಿಕೆ ನಡೆಸಲು ಸರ್ಕಾರ ಅತಿ ಹೆಚ್ಚು ಎಷ್ಟು ಭೂಮಿಯನ್ನು ನೀಡಲಾಗುತ್ತದೆ; | ಕೈಗಾರಿಕೆಗಳಿಗೆ ಅವಶ್ಯಕವಿರುವ ಭೂಮಿಯನ್ನು ಪರಿಶೀಲಿಸಲು ವಾಣಿಜ್ಯ ಮತ್ತು ಕೈಗಾರಿಕೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜಮೀನು ಪರಿಶೋಧನಾ ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯು ಯೋಜನೆಗಳ ಬಂಡವಾಳ ಹೂಡಿಕೆ ಮತ್ತು ಕೈಗಾರಿಕಾ ಚಟುವಟಿಕೆಗಳನ್ನು ಆಧರಿಸಿ ಯೋಜನೆಗಳಿಗೆ ಬೇಕಾಗಬಹುದಾದ ಭೂಮಿಯ ಬಗ್ಗೆ ಪರಿಶೀಲಿಸಿ ಅವಶ್ಯಕವಿರುವ ಭೂಮಿಯನ್ನು ಪರಿಗಣಿಸಲು ಸಂಬಂದಿಸಿದ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ/ ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿಗಳಿಗೆ ಶಿಫಾರಸ್ಸು ಮಾಡುತ್ತದೆ.<br><br>ಅಂತಿಮವಾಗಿ ಸಂಬಂಧಪಟ್ಟ ಅನುಮೋದನಾ ಸಮಿತಿಗಳು ಜಮೀನು ಪರಿಶೋಧನಾ ಸಮಿತಿಯ ಶಿಫಾರಸ್ಸನ್ನು ಪರಿಶೀಲಿಸಿ ಯೋಜನೆಗೆ ಅಗತ್ಯತೆಗೆ ತಕ್ಕಷ್ಟು ಭೂಮಿಗೆ ಅನುಮೋದನೆ ನೀಡುತ್ತವೆ. |
| ಇ | ಇನ್ವೆಸ್ಟ್ ಕರ್ನಾಟಕ ಅಡಿಯಲ್ಲಿ ಒಡಂಬಡಿಕೆ ಮಾಡಿಕೊಂಡ ಎಷ್ಟು ಕಂಪನಿಗಳು ಬಂಡವಾಳ ಹೂಡಿಕೆ ಮಾಡಲು ಪ್ರಾರಂಭಿಸಿದೆ; | ಕಳೆದ 5 ವರ್ಷಗಳಲ್ಲಿ ಇನ್ವೆಸ್ಟ್ ಕರ್ನಾಟಕ ಅಡಿಯಲ್ಲಿ ಒಡಂಬಡಿಕೆ ಮಾಡಿಕೊಂಡ ವಿವರ ಕೆಳಕಂಡಂತಿದೆ.<br><br>➢ "ಇನ್ವೆಸ್ಟ್ ಕರ್ನಾಟಕ - 2020 ಹುಬ್ಬಳ್ಳಿ ಕಾನ್ಫರೆನ್ಸ್" ಕಾರ್ಯಕ್ರಮದಲ್ಲಿ 54 ಕಂಪನಿಗಳೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು, ಅವುಗಳ ಪೈಕಿ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ / ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಗಳಲ್ಲಿ ಅನುಮೋದನೆಯಾದ 21 ಯೋಜನೆಗಳ ಪೈಕಿ 9 ಯೋಜನೆಗಳು ಅನುಷ್ಠಾನಗೊಂಡಿದ್ದು ರೂ.1725.56 ಕೋಟಿ ಬಂಡವಾಳ ಹೂಡಿಕೆಯಾಗಿದೆ ಮತ್ತು 2150 ಉದ್ಯೋಗ ಸೃಜನೆಯಾಗಿದೆ. |

| | | |
|---|---|---|
| | | ➢ "ಇನ್ವೆಸ್ಟ್ ಕರ್ನಾಟಕ - 2022'ರ ಸಮಾವೇಶದಲ್ಲಿ 57 ಕಂಪನಿಗಳೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು, ಅವುಗಳ ಪೈಕಿ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ / ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಗಳಲ್ಲಿ ಅನುಮೋದನೆಯಾದ 20 ಯೋಜನೆಗಳ ಪೈಕಿ 2 ಯೋಜನೆಗಳು ಅನುಷ್ಠಾನಗೊಂಡಿದ್ದು, ರೂ. 4,093.00 ಕೋಟಿ ಬಂಡವಾಳ ಹೂಡಿಕೆಯಾಗಿದೆ ಮತ್ತು 1415 ಉದ್ಯೋಗ ಸೃಜನೆಯಾಗಿದೆ.<br>➢ "ಇನ್ವೆಸ್ಟ್ ಕರ್ನಾಟಕ -2025'ರ ಸಮಾವೇಷದಲ್ಲಿ 98 ಕಂಪನಿಗಳೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು, ಅವುಗಳ ಪೈಕಿ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ / ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಗಳಲ್ಲಿ 13 ಯೋಜನೆಗಳು ಅನುಮೋದನೆ ಆಗಿರುತ್ತವೆ.<br>➢ ಮುಂದುವರೆದು, ಇವುಗಳಲ್ಲಿ ಬಹುತೇಕ ಯೋಜನೆಗಳು ಬೃಹತ್/ ಮೆಗಾ ಯೋಜನೆಗಳಾಗಿರುವುದರಿಂದ ಅನುಷ್ಠಾನಕ್ಕೆ 3-5 ವರ್ಷಗಳು ಬೇಕಾಗಿರುತ್ತದೆ. |
| ಈ | ಇದರಿಂದ ರಾಜ್ಯದಲ್ಲಿ ಎಷ್ಟು ಉದ್ಯೋಗ ಸೃಷ್ಟಿಯಾಗಿದೆ? | ಕಳೆದ 5 ವರ್ಷಗಳಲ್ಲಿ ಇನ್ವೆಸ್ಟ್ ಕರ್ನಾಟಕ ಅಡಿಯಲ್ಲಿ ಒಡಂಬಡಿಕೆ ಮಾಡಿಕೊಂಡು ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ / ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಗಳಲ್ಲಿ ಅನುಮೋದನೆಯಾದ ಒಟ್ಟು 54 (21+20+13) ಯೋಜನೆಗಳ ಪೈಕಿ 11 ಯೋಜನೆಗಳು ಅನುಷ್ಠಾನಗೊಂಡಿದ್ದು, 3565 ಉದ್ಯೋಗ ಸೃಜನೆಯಾಗಿದೆ. |

**ಸಿಐ 374 ಎಸ್‌ಪಿಐ 2025**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು